ಕಡೂರು ಡಿಸ್ಟ್ರಿಕ್ಟ್.

ತಾರೀಖು 2ನೇ ಜುಲೈ 1889.

ಕಡೂರು ಡಿಸ್ಟ್ರಿಕ್ಟ್ ಕಡೂರು ತಾ॥ ಸಬ್ ರೆಜಿಸ್ಟ್ರಾರ್‌ರವರ ಆಫೀಸಿನಲ್ಲಿ ಈ ಕೆಳಗೆ ನಮೂದಿಸಿರುವ ಜೇವಾರಸು ದಸ್ತಾವೇಜುಗಳನ್ನು ಕ್ರಮಪ್ರಕಾರ ವಾರಸುದಾರಾಗಲಿ ಆಥವಾ ಅಧಿಕಾರಹೊಂದಿದ ಮುಕ್ತಾರೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳವಳಗಾಗಿ ಹಾಜರಾಗಿ ವಾಪಸು ವಡೆಯದೇ ಹೋದರೆ 1877ನೇ ಇಸವಿ IIIನೇ ನಂಬರ್ ಇಂಡ್ಯೂ ರೆಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್	ದಸ್ತಾವೇಜು ಬರೆದು ಕೊಟ್ಟವರ ಹೆಸರು.	ದಸ್ತಾವೇಜು ಬರೆಸಿಕೊಂಡವರ ಹೆಸರು.	ದಸ್ತಾವೇಜು ಹುಟ್ಟಿದ ತಾರೀಖು.	ದಸ್ತಾವೇಜು ರಿಜಿಸ್ಟರ್ ಮಾಡಬೇಕೆಂದು ಹುಟ್ಟಿದ ತಾರೀಖು.	ದಸ್ತಾವೇಜು ರಿಜಿಸ್ಟರ್ ಆದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
IIನೇ ಬುಕ್ಕು 3 ——— 87—88	ಕಡೂರು ತಾ॥ ದೊಡ್ಡ ದೇವನೂರು ವಾಸಿ ಪೆಸ್ತರ ಸಂಣಂಕರಿನ ಮಗ ಯಲ್ಲಯನ ಮಗ ಹನುಮಂತ	ದೇವನೂರು ವಾಸಿ ಪೆಸ್ತರ ದಾಸನ ಮಗ ಯರೆಹಳ್ಳಿ ಜಸ್ತರ	30—4—86		30—6—87	ಇದೇ ದೇವನೂರು ಗ್ರಾಮದಲ್ಲಿ ಇರತಕ್ಕ ಸರ್ವೆ ನಂಬರು 25–27 ಮತ್ತು ಈ ಪೈಕಿ ಹೊಲಕ್ಕೆ ಎಕ್ರೆ 3—8 ಆ ಕಾರ 3—8 ಬಾಬತು ಮತ್ತು ನಂ. 120ನೇ ತರಿ ಇವು ಪಿತರಾರ್ಜಿತವಾಗಿ ಕೆರಭಂಡಿ ಚಾಕರಿ ಸಂಬಂಧದ ಜಗೀರ್‌ಗಳಾಗಿರುತ್ತದೆ. ನಾನು ಚಾಕರಿ ಮಾಡಲಾರದೆ ನೀನೆ 20 ವರುಷಗಳಿಂದ ಅನುಭವಿಸುತ್ತಾ ಬಂದಿರುತ್ತಿ ಆದ ಕ್ರಯುಕ್ತ ಈಚಿಗೆ ಆದ ಆಫೀಸ್ ಪಂಚಾಯಿತರ ಜೇಳಿಕೆಗೆ ಒಪ್ಪಿಕೊಂಡು ಸದರೀ ಸ್ವತ್ತುಗಳ ಮೇಲೆ ಇದ್ದ ಹಕ್ಕುದಾರಿಯಲ್ಲ ತ್ಯಜಿಸಿ ವಹಿಸಿಕೊಟ್ಟಿರುತ್ತಾನೆ.
IIನೇ ಬುಕ್ಕು 4 ——— 87—88	ಪಟ್ಟಣಗೆರೆ ಮಾಗಣಿ ಸರಸ್ವತೀಪುರದ ಕೆಂಚಬಾಲ	ಪಟ್ಟಣಗೆರೆ ಹಿರಿಯಂಣಪ್ಪನವಕ್ಕಳು ಸಾಹುಕಾರು ರಂಗಂಣನವರು	6—7—86		30—6—87	ಇದೇ ಮಾಗಣಿ ಕಾಟಾಪುರ ಗ್ರಾಮದ ಸರ್ವೆ ನಂ. 27ನೇ ಖುಷ್ಕಿ ಜಮೀನನ್ನು 40 ರೂಪಾಯಿಗೆ ನಿವ್ಯ್ರತಂದೆ ಹಿರಿಯಂಣಪ್ಪನವರಿಂದ ಕ್ರಯಕ್ಕೆ ಪಡದು ಆ ಬಾಬತು ಮೊಬಲಗು ಪೂರ್ತಿ ಮಾಡುವವರಿಗೆ ಚಿಕ್ಕಂಗಳ ಮಾಗಣಿ ಚನ್ನೇನಹಳ್ಳಿ ಗ್ರಾಮದ ಸರ್ವೆ ನಂಬರು 48ರ ಪೈಕಿ 2ನೇ ನಂ. ಎಕ್ರೆ 6 ಆ ಕಾರ 5—12 ಬಾಬತು ಜಮೀನನ್ನು ಅನುಭವಿಸುತ್ತಿರಬೇಕಾಗಿ ಕೊಟ್ಟಿದ್ದೇನಪ್ಪ ಈಗ ನೀವು ಹಣಕ್ಕೆ ತಗಾದೆ ಮಾಡಿದ್ದರಿಂದ ಸದರೀ ಗೋಡೆಹೊಲವೆಂಬ ಜಮೀನನ್ನೆ ಸದರಿ ಮೊಬಲಗ್ಯೆ ಕ್ರಯಕ್ಕೆ ಕೊಟ್ಟಿದ್ದೇನೆಂತ.

ಜಿ. ಜಿ. ಮೈಕಲ್‌ಜಾರ್,
ರಿಜಿಸ್ಟ್ರಾರ್.

ಮೈಸೂರ ಗೆಜೆಟ್ ಚಂದಾ ದರ ನಗ್ಯೆರೆ.

ತಾರೀಖು 26ನೇ ಜನವರಿ 1889.

ಮೈಸೂರು ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ. ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸು ಮುಂತಾದವುಗಳು ಬೆಂಗಳೂರಲ್ಲಿರುವ ಮೈಸೂರು ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.